ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

---

ಸಂಖ್ಯೆ: ವಾಇ : ಉನಿ : ಸುಮಪ : 2014–15 : ಆಗಸ್ಟ್ 1, 2014

<u>ಪತ್ರಿಕಾ ಪ್ರಕಟಣೆ</u>

## ಕಾಮನ್ ವೆಲ್ತ್ ಕ್ರೀಡಾ ಸಾಧಕರಿಗೆ ಮುಖ್ಯಮಂತ್ರಿ ಅಭಿನಂದನೆ

<u>ಬೆಂಗಳೂರು, ಆಗಸ್ಟ್ 1 ( ಕರ್ನಾಟಕ ವಾರ್ತೆ)</u> :

ಕಾಮನ್ ವೆಲ್ತ್ ಕ್ರೀಡೆಗಳಲ್ಲಿ ಪಾಲ್ಗೊಂಡು ವಿಜಯ ಸಾಧಿಸಿದ ಕರ್ನಾಟಕದ ಕ್ರೀಡಾ ಸಾಧಕರಿಗೆ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಮನಸಾರೆ ಅಭಿನಂದಿಸಿದ್ದಾರೆ.

ಪ್ರಸ್ತುತ ಲಂಡನ್‌ನಲ್ಲಿರುವ ಹಾಗೂ ಡಿಸ್ಕಸ್ ಥ್ರೋನಲ್ಲಿ ಚಿನ್ನದ ಪದಕ ಪಡೆದ ಶ್ರೀ ವಿಕಾಸ್ ಗೌಡ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಶ್ರೀ ಸಿದ್ಧರಾಮಯ್ಯ ಅವರು ತಮ್ಮ ಸಾಧನೆ ಇಡೀ ಆರು ಕೋಟಿ ಕನ್ನಡಿಗರಿಗೆ ಹೆಮ್ಮೆ ತಂದಿದೆ ಎಂದು ಬಣ್ಣಿಸಿದ್ದಾರೆ.

ಅಂತೆಯೇ, ಶೂಟಿಂಗ್‌ನಲ್ಲಿ ರಜತ ಪದಕ ಗಳಿಸಿದ ಶ್ರೀ ಪ್ರಕಾಶ್ ನಂಜಪ್ಪ ಅವರನ್ನೂ ದೂರವಾಣಿ ಮೂಲಕ ಸಂಪರ್ಕ ಸಾಧಿಸಲು ಯತ್ನಿಸಿದರಾದರೂ, ಅವರು ಸಂಪರ್ಕಕ್ಕೆ ದೊರೆಯಲಿಲ್ಲ. ಶ್ರೀ ಪ್ರಕಾಶ್ ನಂಜಪ್ಪ ಅವರ ಸಾಧನೆಯೂ ತಮ್ಮಲ್ಲಿ ಸಂತಸ ಮೂಡಿಸಿದೆ ಎಂದು ಹೇಳಿದ್ದಾರೆ.

ನಗದು ಬಹುಮಾನ ಪ್ರಕಟ

ಕಾಮನ್ ವೆಲ್ತ್ ಕ್ರೀಡೆಗಳಲ್ಲಿ ವಿಜಯ ಸಾಧಿಸಿ ಕರ್ನಾಟಕಕ್ಕೆ ಗೌರವ ತಂದ ಶ್ರೀ ವಿಕಾಸ್ ಗೌಡ ಅವರಿಗೆ 25 ಲಕ್ಷ ರೂ ಹಾಗೂ ಶ್ರೀ ಪ್ರಕಾಶ್ ನಂಜಪ್ಪ ಅವರಿಗೆ 15 ಲಕ್ಷ ರೂ ನಗದು ಬಹುಮಾನವನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ ಎಂದು ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವ ಶ್ರೀ ಕೆ. ಅಭಯಚಂದ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

********

ಡಿ ಪಿ ಎಂ